# ವಿವೇಕಪ್ರಭ

## ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ

ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ ಕಾರ್ಯಾಲಯ, ಯಾದವಗಿರಿ, ಮೈಸೂರು 570 020

## ಚಂದಾ ಅರ್ಜಿ

ಮಾನ್ಯರೇ, (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

☐ ನನ್ನನ್ನು / ಈ ಕೆಳಕಂಡ ಹೆಸರಿನವರನ್ನು 'ವಿವೇಕಪ್ರಭ' ಪತ್ರಿಕೆಯ ಚಂದಾದಾರರನ್ನಾಗಿ/ ಪೋಷಕರನ್ನಾಗಿ ಮಾಡಬೇಕಾಗಿ ವಿನಂತಿ

☐ ನನ್ನ/ ಕೆಳಕಂಡ ಹೆಸರಿನವರ ಚಂದಾವನ್ನು ನವೀಕರಿಸಬೇಕಾಗಿ ವಿನಂತಿ. ಈಗಿನ ಚಂದಾಸಂಖ್ಯೆ.........................

**ನನ್ನ ವಿಳಾಸ**

ನನ್ನ ಹೆಸರು.......................................................................

ವಿಳಾಸ.............................................................................

.......................................................................................

..............................................ಪಿನ್.............................

ಚಂದಾ ವಿವರ: (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

| 1 ವರ್ಷದ ಚಂದಾ | 3 ವರ್ಷದ ಚಂದಾ | ಆಜೀವ ಚಂದಾ | ಪೋಷಕರ ಸಹಾಯಧನ |
|---|---|---|---|
| ₹ 140 | ₹ 375 | ₹ 3000 | ₹ 5000 |

**ಪತ್ರಿಕೆ ಪಡೆಯುವವರ ವಿಳಾಸ**

ಹೆಸರು.............................................................................

ವಿಳಾಸ.............................................................................

.......................................................................................

..............................................ಪಿನ್.............................

ಹಣವನ್ನು ಮನಿ ಆರ್ಡರ್ / ಡ್ರಾಫ್ಟ್ (ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ A/c ಹೆಸರಿನಲ್ಲಿ) ಮೂಲಕ ಕಳುಹಿಸುತ್ತಿದ್ದೇನೆ.

ವಿವರ.......................................................................

1. ಹೊರ ಊರಿನ ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
2. ವಿದೇಶಗಳಿಗೆ ಅನ್ವಯವಾಗುವ ಚಂದಾ ವಿವರಗಳಿಗೆ ಹಾಗೂ ಇತರ ವಿವರಗಳಿಗಾಗಿ ನಮಗೆ ಬರೆಯಿರಿ.

ಸಹಿ

ಬೇಕಾದಷ್ಟನ್ನು ಪುಸ್ತಕ ಓದಿ ತಿಳಿದುಕೊಳ್ಳಬಹುದು. ಆದರೆ ಭಗವಂತನಲ್ಲಿ ಭಕ್ತಿಯಿಲ್ಲದಿದ್ದರೆ, ಆತನ ಸಾಕ್ಷಾತ್ಕಾರ ಪಡೆಯಬೇಕು ಎಂಬ ಇಚ್ಛೆಯಿಲ್ಲದಿದ್ದರೆ ಎಲ್ಲವೂ ವ್ಯರ್ಥ. ವಿವೇಕ ವೈರಾಗ್ಯಗಳಿಲ್ಲದ ಬರಿಯ ವಿದ್ವಾಂಸರ ದೃಷ್ಟಿ ಕಾಮಕಾಂಚನಗಳ ಮೇಲೆ ನೆಲೆಸಿರುತ್ತದೆ. ಹದ್ದು ಬಹಳ ಎತ್ತರಕ್ಕೇನೊ ಹಾರಿಹೋಗುತ್ತದೆ, ಆದರೆ ಅದರ ದೃಷ್ಟಿ ಮಾತ್ರ ಹೆಣದ ಗುಂಡಿಗಳ ಕಡೆಗೇ.

–ಶ್ರೀರಾಮಕೃಷ್ಣ ಪರಮಹಂಸ

ಮನಸ್ಸಿನಲ್ಲೇ ಶುದ್ಧ, ಅಶುದ್ಧ ಎಲ್ಲವೂ. ಮನುಷ್ಯ ತನ್ನ ಮನಸ್ಸನ್ನು ಮೊದಲು ಮಲಿನಗೊಳಿಸಿಬಿಡುತ್ತಾನೆ. ಅದರಿಂದಲೇ ಅವನು ಇತರರ ದೋಷವನ್ನು ನೋಡುತ್ತಾನೆ. ನೀವು ಇತರರ ದೋಷವನ್ನು ನೋಡಿದರೆ ಅವನಿಗೇನಾಗುತ್ತದೆ? ಅದರಿಂದ ನಿಮಗೇ ಹಾನಿಯಾಗುತ್ತದೆ. ಬೇರೆಯವರ ದೋಷವನ್ನು ನೋಡುವುದೆ? ಇತರರ ದೋಷವನ್ನು ನೋಡದಿರುವುದು ಕ್ಷಮಾರೂಪದ ತಪಸ್ಸು.

–ಶ್ರೀಮಾತೆ ಶಾರದಾದೇವಿ

"ಮಾತೃದೇವೋ ಭವ" ತಾಯಿಯನ್ನು ದೇವರಂತೆ ಕಾಣು, ತಂದೆಯನ್ನು ದೇವರಂತೆ ಕಾಣು ಎಂಬುದನ್ನು ನೀನು ಓದಿರುವೆ. ಆದರೆ ನಾನು, "ದರಿದ್ರ ದೇವೋ ಭವ, ಮೂರ್ಖದೇವೋ ಭವ" ಎನ್ನುತ್ತೇನೆ. ದೀನರು, ಅವಿದ್ಯಾವಂತರು, ಮೂಢರು, ದುಃಖಿಗಳೇ ನಿನಗೆ ದೇವರಾಗಲಿ. ಇವರ ಸೇವೆಯನ್ನು ಮಾಡುವುದೇ ಅತ್ಯಂತ ಪವಿತ್ರವಾದ ಧರ್ಮವೆಂದು ತಿಳಿ.

–ಸ್ವಾಮಿ ವಿವೇಕಾನಂದ

## ದುರ್ಗಾಪೂಜೆ ಹಾಗೂ ದೀಪಾವಳಿಯ ಶುಭಾಶಯಗಳು

ಸಂಪಾದಕೀಯ

# ದೇವೀ ಆರಾಧನೆಯ ನೆಲೆಗಳು

ಪ್ರೀತಿ ಎನ್ನುವುದು ಪರಿಶುದ್ಧವಾದದು. ಅದು ಯಾರ ನಡುವೆಯೇ ಆಗಿರಲಿ, ಯಾವ ಹಂತದಲ್ಲೇ ಇರಲಿ, ಯಾವ ಸನ್ನಿವೇಶದಲ್ಲೇ ಇರಲಿ – ತಾನು, ತನ್ನದು ಎಂಬ ಅಹಂಭಾವವನ್ನು ಮರೆಯುವುದೇ ಪ್ರೀತಿ. ಪ್ರೀತಿಯ ಹೆಸರಿನಲ್ಲಿ ಜಗತ್ತಿ ನಲ್ಲಿ ಕಂಡುಬರುವ ಗೊಂದಲಗಳಿಗೆಲ್ಲ ಕಾರಣ, ಅದನ್ನು ಕುರಿತ ತಪ್ಪುಕಲ್ಪನೆಗಳು, ಅದರೊಂದಿಗೆ ಸ್ವಾರ್ಥ ಅಸೂಯೆ ದ್ವೇಷಗಳನ್ನು ಬೆರೆಸುವುದು ಹಾಗೂ ಅದನ್ನು ಕುರಿತ ಅಜ್ಞಾನ – ಇವು. ಎಲ್ಲಿ ಪ್ರೀತಿ ಬೇರೆ ಏನನ್ನೂ ಬಯಸದೆ, ಕೇವಲ ಪ್ರೀತಿ ಯನ್ನಷ್ಟೇ ಬಯಸುವುದೋ ಅದೇ ನಿಜವಾದ ಪ್ರೀತಿ. ಇದರೊಂದಿಗೆ ನಮ್ಮ ದೈನಂದಿನ ಜಂಜಾಟದ ನಾನಾ ವ್ಯಾಪಾರಗಳು ಮಿಶ್ರವಾಗದಂತೆ ಕಾಯ್ದುಕೊಳ್ಳಬಲ್ಲವರಿಗೆ ಮಾತ್ರ ಇದರರ್ಥ ತಿಳಿದಿದೆಯೆನ್ನಬೇಕು. ಇನ್ನೊಂದು ರೀತಿ ನೋಡಿದರೆ, ಅಂಥವರು ತಮ್ಮ ದೈನಂದಿನ ಪರಿಸ್ಥಿತಿ, ಕೆಲಸ, ಚಟುವಟಿಕೆಗಳು ಹಾಗೂ ವೈಯಕ್ತಿಕ ಭಾವವೈವಿಧ್ಯಗಳನ್ನೆಲ್ಲ ಪ್ರೀತಿಯ ಪರಿಶುದ್ಧತೆಗೆ ಅನು ಗುಣವಾಗಿ ಪರಿವರ್ತಿಸಿಕೊಳ್ಳಬಲ್ಲರು. ಇದು ಲೌಕಿಕ ಜೀವನದ ರೀತಿ.

## ಪ್ರೀತಿಯ ದೈವೀಕರಣ

ಪ್ರೀತಿ ಎಷ್ಟೇ ಪರಿಶುದ್ಧವಾಗಿದ್ದರೂ, ಅದೆಷ್ಟೇ ದೋಷರಹಿತವಾಗಿದ್ದರೂ, ಅಲ್ಲಿ ದೈವೀ ಅಸ್ತಿತ್ವದ ಅರಿವು ಇದ್ದರೆ ಮಾತ್ರ ಅದು ಆಧ್ಯಾತ್ಮಿಕವೆನಿಸುವುದು. ಲೌಕಿಕ ಜೀವನದಲ್ಲಿ ನಾನಾ ಏರುಪೇರುಗಳ ನಡುವೆ, ಮೇಲೆ ಹೇಳಿದ ಪರಿಶುದ್ಧ ಪ್ರೀತಿಯನ್ನು ಕಂಡುಕೊಳ್ಳುವ ಜನರ ಸಂಖ್ಯೆ ಅತ್ಯಂತ ಕಡಿಮೆ; ಆದರೆ ಪ್ರತಿಯೊಬ್ಬರ ಜೀವನದಲ್ಲೂ ಇಂಥ ಪ್ರೀತಿಯ ಕಲ್ಪನೆ ಹಾಗೂ ಅನುಭವ ಒಂದಲ್ಲ ಒಂದು ಹಂತದಲ್ಲಿ ಕಾಣಿಸಿಕೊಳ್ಳುವುದು ಸಹಜ. ಎಷ್ಟು ಜನ ಅದರ ಮೌಲ್ಯವನ್ನರಿತು ಅಂಥ ಪ್ರೀತಿಯ ಲತೆಯನ್ನು ಬೆಳೆಸಿ, ನೀರೆರೆದು ಬದುಕನ್ನು ಸುಂದರ ಹೂವಿನ ಉದ್ಯಾನವನ್ನಾಗಿ ಮಾಡುವರು? ಅಂಥವರನ್ನು ಅರಸಿಕೊಂಡು ಹೋಗಬೇಕಾಗಿದೆ. ಅದೆಷ್ಟೇ ಅಪೂರ್ವವಾಗಿದ್ದರೂ, ಎಷ್ಟೇ ಮಹತ್ವದ್ದಾಗಿದ್ದರೂ ಇನ್ನೂ ಅದು ಲೌಕಿಕ ಪರಿಧಿಯನ್ನು ದಾಟಿ ಹೋಗಿರುವುದಿಲ್ಲ. ಉದಾಹರಣೆಗೆ ಮಾತೃಪ್ರೇಮ. ತಾಯಿ ಮಗುವಿನ ಮೇಲೆ ಹೊಂದಿರುವ ಪ್ರೀತಿ ಲೌಕಿಕ ಬದುಕಿನಲ್ಲಿ ಅತ್ಯಂತ ಪರಿಶುದ್ಧವೆನ್ನುತ್ತಾರೆ. ಜೈವಿಕ, ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಈ ಸಂಬಂಧವನ್ನು ಎಷ್ಟೇ ವಿಶ್ಲೇಷಿಸಿದರೂ, ಎಲ್ಲ ಮಿತಿಗಳನ್ನೂ ಮೀರಿ ನಿಲ್ಲುವ ಮಾತೃವಾತ್ಸಲ್ಯ ಹಾಗೂ ಮಾತೃಪ್ರೇಮ ಅಗೋಚರ ನೆಲೆಯ ದೈವೀಪ್ರೇಮದತ್ತ ಮುಖಮಾಡುತ್ತದೆ. ಈ ಅರ್ಥ ದಲ್ಲಿ ಈ ಸಂಬಂಧ ಆಧ್ಯಾತ್ಮಿಕ ಭಾವಗಳಿಗೆ ತುಂಬ ಹತ್ತಿರ; ಆದರೆ ಇನ್ನೂ ಇಲ್ಲಿ ದೈವೀ ಅಸ್ತಿತ್ವದ ಅರಿವು ಬಂದಿರುವುದಿಲ್ಲ. ಅಂಥ ಅರಿವು ಬಂದೊದಗಿದಾಗ ಈ ವಾತ್ಸಲ್ಯ, ಪ್ರೇಮದ ಅಸ್ತಿತ್ವ ಅಸಾಧಾರಣವೆಂಬಂತೆ ದೈವೀಕರಿಸಲ್ಪಡುತ್ತದೆ. ಭಗವಂತನನ್ನು ಮಾತೆಯೆಂದು ಪರಿಗಣಿಸಿ ಪೂಜಿಸುವ, ಆಧ್ಯಾತ್ಮಿಕ ಸಾಧನೆಗೆ ಅದೊಂದು ಮಾರ್ಗವೆಂದು ಪರಿಗಣಿಸುವ ಈ ವಿಧಾನ ಅತ್ಯಂತ ಸಹಜವಾದ ವಿಧಾನ; ಅದು ಎಲ್ಲ ದರ್ಶನಗಳಲ್ಲೂ, ಎಲ್ಲ ಪರಂಪರೆಗಳಲ್ಲೂ ಒಪ್ಪಿತವಾದ ವಿಧಾನ. ನಮ್ಮಲ್ಲಿ ಮಾತೃ ಆರಾಧನೆಯು ಅನಾದಿಕಾಲದಿಂದ ಇಂದಿನವರೆಗೆ ಎಲ್ಲೆಡೆ ವ್ಯಾಪಕವಾಗಿ ಆಚರಿಸಲ್ಪಡುವ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಧಿ ವಿಧಾನಗಳಲ್ಲಿ ಪ್ರಮುಖವಾಗಿ ನಿಂತಿದೆ. ಆಳವಾದ ತಾತ್ತ್ವಿಕ ಆಯಾಮ ಇದಕ್ಕಿದೆ; ಜೀವನದ ವಿಭಿನ್ನ ನೆಲೆಗಳಲ್ಲಿ ವೈವಿಧ್ಯಮಯ ವಾದ ಸಾಂಸ್ಕೃತಿಕ ಆಯಾಮವೂ ಇದಕ್ಕಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಆಚರಣಾತ್ಮಕವಾದ ಆಧ್ಯಾತ್ಮಿಕ ಆಯಾಮವೂ ಇದಕ್ಕಿದೆ.

## ಅಭಯಪ್ರದಾತೆ

ಮಗುವಿನ ಜನನಕ್ಕೂ ಮೊದಲೇ ಆರಂಭವಾಗುವ ಮಾತೃಭಾವ ನಿಜವಾಗಿಯೂ ಸ್ತ್ರೀಯಲ್ಲಿ ಎಂದು ಜಾಗೃತವಾಗುವುದು? ಇದು ಪೂರ್ಣವಾಗಿ ಪ್ರಕಾಶವಾಗುವುದು ಸ್ತ್ರೀಯು ತಾಯಿಯಾದಾಗ ಎಂಬ ಅಂಶ ನಿಜವಿದ್ದರೂ, ಮೂಲತಃ ಈ ಮಾತೃಭಾವ ಮಾನವನ ಅಂತರಂಗದ ಆಳದಲ್ಲಿದೆ. ಸ್ತ್ರೀಪುರುಷ ಭೇದವಿಲ್ಲದೆ ಈ ಭಾವ ಸುಪ್ತರೂಪದಲ್ಲಿರುತ್ತದೆ; ಅದೇ ಭಾವ ತಕ್ಕ ಸನ್ನಿವೇಶ ಒದಗಿಬಂದಾಗ ಪ್ರಕಟಗೊಳ್ಳುತ್ತದೆ. ಆದರೆ ಮಗುವಿನ ಜನ್ಮದಾತೆ ನಿಜವಾಗಿ ಸ್ತ್ರೀಯಾಗಿರುವುದರಿಂದ, ಮಾತೃಭಾವ ಪೂರ್ಣಪ್ರಮಾಣದಲ್ಲಿ ಪ್ರಕಾಶಗೊಳ್ಳುವುದು ಅವಳಲ್ಲಿ ಎನ್ನುವುದು ವಾಸ್ತವ. ಹುಟ್ಟಿದ ಮಗುವಿಗೆ ಏನೂ ತಿಳಿಯದು; ಹಾಗಾಗಿ ಅದರ ಪಾಲನೆ, ಪೋಷಣೆ, ರಕ್ಷಣೆ ತಾಯಿಯ ಜವಾಬ್ದಾರಿ. ಆದರೆ ಈ ಜವಾಬ್ದಾರಿ ಹೊರೆಯಲ್ಲ, ಆಯಾಸದ ಕೆಲಸವಲ್ಲ. ಅದನ್ನೆಲ್ಲ ಅವಳು ಪ್ರೀತಿ, ವಾತ್ಸಲ್ಯಗಳೆಂಬ ವಿಶೇಷ ಭಾವದಿಂದ ಮರೆಯುತ್ತಾಳೆ. ತನ್ನೆಲ್ಲ ಬವಣೆ, ವೇದನೆ, ದುಃಖಗಳನ್ನು ಮರೆತು, ತನ್ನ ಮಗುವಿನ ಮೇಲಿರುವ ಪ್ರೀತಿಯಿಂದ ಅದರ ಎಲ್ಲ ಜವಾಬ್ದಾರಿಯನ್ನೂ ತೆಗೆದುಕೊಳ್ಳುವಂತೆ ಅವಳ ಹೃದಯ ದಲ್ಲಿ ಭಗವಂತ ನೆಟ್ಟಿರುವ ವಿಶೇಷ ಭಾವವಿದು – ಅದು ಒಂದು ಶಕ್ತಿಯೂ ಹೌದು. ದುರ್ಗಾಸಪ್ತಶತಿಯಲ್ಲಿ ಬರುವ **'ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ। ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥'** ಎಂಬ ಸುಪ್ರಸಿದ್ಧ ಸ್ತೋತ್ರದಲ್ಲಿ ಇಂಥ ವಿಶೇಷ ಶಕ್ತಿ ದೈವಿಕವಾದದ್ದು, ಜಗನ್ಮಾತೆಯೇ ಸಾಕ್ಷಾತ್ತಾಗಿ ಈ ಮಾತೃಭಾವದ ರೂಪದಲ್ಲಿ ನೆಲೆಸಿದ್ದಾಳೆ ಎಂಬ ವಿವರಣೆಯಿದೆ.



ಜಗನ್ಮಾತೆಯು ಅಭಯಪ್ರದಾತೆ ಎಂದು ಎಲ್ಲೆಡೆ ಕರೆಯಲ್ಪಟ್ಟಿದ್ದಾಳೆ. ಮಗುವನ್ನು ಸಂಪೂರ್ಣವಾಗಿ ರಕ್ಷಿಸುವ, ಸಾಕಿ ಸಲಹುವ ಜವಾಬ್ದಾರಿ ಹೇಗೆ ತಾಯಿಯದೋ, ಅದೇ ರೀತಿ ಜಗತ್ತಿನ ತಾಯಿಯಾಗಿರುವ ಭಗವತಿಯು ಜಗತ್ತಿನ ಎಲ್ಲ ಜೀವಿಗಳನ್ನೂ, ಸ್ಥಾವರ–ಜಂಗಮಾತ್ಮಕವಾದ ಇಡೀ ಪ್ರಪಂಚವನ್ನೂ ಪಾಲಿಸುತ್ತಾಳೆ ಹಾಗೂ ಪೋಷಿಸುತ್ತಾಳೆ ಎನ್ನಲಾಗಿದೆ. ಇಲ್ಲಿ ತಾಯಿಗಿರುವ ಅಸಾಧಾರಣ ಜವಾಬ್ದಾರಿ ಅತ್ಯಂತ ಮುಖ್ಯವಾಗಿದೆ. ತನ್ನ ಮಕ್ಕಳ ಹಿತಕ್ಕಾಗಿ, ಅವುಗಳ ಸುಖಕ್ಕಾಗಿ ತಾಯಿ ಎಂಥ ತ್ಯಾಗವನ್ನಾದರೂ ಮಾಡಬಲ್ಲಳು. ಜಗನ್ಮಾತೆ ಕೂಡ ಅದೇ ರೀತಿ, ತನ್ನನ್ನೇ ಆಶ್ರಯಿಸಿರುವ ಭಕ್ತನ ಉದ್ಧಾರಕ್ಕಾಗಿ ಎಂಥ ತೊಂದರೆಯನ್ನಾದರೂ ಸಹಿಸಬಲ್ಲಳು. ಒಂದು ರೀತಿಯಲ್ಲಿ ಅಭಯಪ್ರದಾನ ಎಂದರೆ ಇದೇ. ಇಡೀ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣಳಾಗಿರುವ ಆದಿಶಕ್ತಿ ಎಂಥ ಸಂದರ್ಭದಲ್ಲೂ ತನ್ನ ಕೈಬಿಡಲಾರಳು ಎಂಬ ನಂಬಿಕೆ ಭಕ್ತನಲ್ಲಿ ಸ್ಥಿರವಾಗಿರುವ ತನಕ ಅವನಿಗೆ ಯಾವುದೇ ಭಯವಿಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ: "ನನ್ನ ತಾಯಿ! ಯಾರು ನನ್ನ ತಾಯಿ? ಓ, ಆಕೆ ಜಗಜ್ಜನನಿ. ಈ ಜಗತ್ತನ್ನು ಸೃಷ್ಟಿಸಿರುವವಳು, ಪಾಲಿಸುತ್ತಿರುವವಳು ಅವಳೇ. ಅವಳೇ ಸರ್ವದಾ ತನ್ನ ಮಕ್ಕಳನ್ನು ನೋಡಿಕೊಳ್ಳುತ್ತಿರುತ್ತಾಳೆ. ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳಲ್ಲಿ ಯಾವುದು ಯಾರಿಗೆ ಬೇಕಾದರೂ ಅದನ್ನು ಅವರಿಗೆ ಕೊಡುತ್ತಾಳೆ." *(ವಚನವೇದ, ಸಂ.೧, ಪು.೩೧೩)*

ಭಕ್ತನಲ್ಲಿ ತಾನು ಜಗನ್ಮಾತೆಯ ಶಿಶು ಎಂಬ ಮಾತೃಭಾವ ಅತ್ಯಂತ ಪವಿತ್ರವಾದ ಆಧ್ಯಾತ್ಮಿಕ ಭಾವನೆಯೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಸಾಧಕನು ಭಗವಂತನನ್ನೇ ಸಂಪೂರ್ಣ ಆಶ್ರಯಿಸಿ, ಸಾಕ್ಷಾತ್ಕಾರವಾಗುವ ತನಕವೂ ತಾಯಿ ತನ್ನನ್ನು ನೋಡಿಕೊಳ್ಳುವಳು ಎಂಬ ಭರವಸೆ ಹೊಂದಿದ್ದರೆ ಅವನ ಸಾಧನೆಯೂ ನಿರಾತಂಕವಾಗಿ ಮುಂದುವರೆಯುವುದು. ಹೀಗೆ ಮುಂದುವರೆಯುವ ಸಾಧಕನಿಗೆ ಜಗನ್ಮಾತೆ ತಾನಾಗಿಯೇ ಮಾಯೆಯ ಪರದೆಯನ್ನು ಸರಿಸಿ ಭಗವದ್ದರ್ಶನ ಮಾಡಿಸುವಳು ಎಂದು ಅವರು ಹೇಳುತ್ತಾರೆ.

## ಅನ್ಯಥಾ ಶರಣಂ ನಾಸ್ತಿ

ಭಗವತ್ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸುವ ಸಾಧಕನಿಗೆ ಹಲವು ವಿಧಾನಗಳಿವೆ; ಅವುಗಳಲ್ಲಿ ಪ್ರಮುಖವಾದ ಒಂದು ಮಾರ್ಗ ಭಕ್ತಿಮಾರ್ಗ. ಭಾವಪ್ರಧಾನವಾದ ಈ ಮಾರ್ಗದಲ್ಲಿ ಭಕ್ತನು ಒಂದು ಭಾವವನ್ನು ಆಧರಿಸಿಕೊಂಡು, ತನ್ನೆಲ್ಲ ಜೀವನವನ್ನೂ ಅದಕ್ಕನುಗುಣವಾಗಿ ರೂಪಿಸಿಕೊಂಡು ಭಕ್ತಿಯನ್ನು ಬೆಳೆಸಿಕೊಳ್ಳಬೇಕು. ದಾಸ್ಯಭಾವ, ಸಖ್ಯಭಾವ, ಮಾತೃಭಾವ, ಸಂತಾನಭಾವ, ಮಧುರಭಾವ– ಹೀಗೆ ಅನೇಕ ಬಗೆಯ ಭಾವಗಳಿವೆ. ಸಾಧಕನ ಮನಸ್ಥಿತಿಗೆ ಅನುಕೂಲವೆನಿಸುವ ಒಂದು ಭಾವವನ್ನು ತನ್ನ ಮೇಲೆ ಆರೋಪಿಸಿಕೊಂಡು, ಆ ಭಾವಕ್ಕೆ ಅನುಗುಣವಾಗಿ ಭಗವಂತನನ್ನು ತನ್ನ ಒಡೆಯನೆಂದೋ, ಸ್ನೇಹಿತನೆಂದೋ, ಶಿಶುವೆಂದೋ, ತಾಯಿಯೆಂದೋ ಅಥವಾ ಪ್ರಿಯಕರನೆಂದೋ ಅವನು ಭಾವಿಸಿಕೊಳ್ಳುತ್ತಾನೆ. ಅದಕ್ಕೆ ತಕ್ಕಂತೆ ಭಗವಂತನೊಂದಿಗೆ ಆತ್ಮೀಯವಾದ ಸಂಬಂಧವನ್ನು ಬೆಳೆಸಿ, ಆ ಬಗೆಯ ಭಾವದಲ್ಲಿ ತನ್ನೆಲ್ಲ ಸಾಧನೆಯನ್ನು ವಿಲೀನಗೊಳಿಸುತ್ತಾನೆ. ಹೀಗೆ ಮುಂದುವರಿಯುತ್ತಾ ಸಾಧಕನು ಹಂತಹಂತವಾಗಿ ಭಗವಂತನಲ್ಲಿ ಭಕ್ತಿಯನ್ನು ಬೆಳೆಸಿಕೊಂಡು ಸಾಕ್ಷಾತ್ಕಾರವನ್ನು ಹೊಂದುವನು. ಭಕ್ತಿಶಾಸ್ತ್ರಗಳಲ್ಲಿ ಹೇಳಿರುವ ಈ ಬಗೆಯ ಸಾಧನೆಯನ್ನು ಹಲವು ಮಂದಿ ಸಾಧಕರು ಅನುಸರಿಸಿ, ಗುರಿ ತಲುಪಿದ್ದನ್ನು ನಮ್ಮ ಭಕ್ತಿಪರಂಪರೆ ದಾಖಲಿಸಿದೆ.

ಭಗವಂತನನ್ನು ತಾಯಿಯೆಂದು ತಿಳಿದು ಆರಾಧಿಸುವ ಪರಂಪರೆ ನಮ್ಮಲ್ಲಿ ಅತ್ಯಂತ ಪ್ರಾಚೀನ. ವೇದಗಳಲ್ಲೇ ಇದರ ಕುರುಹುಗಳಿವೆ; ಮುಂದೆ ಇತಿಹಾಸ ಪುರಾಣಗಳಲ್ಲೂ, ತಂತ್ರ–ದರ್ಶನಗಳಲ್ಲೂ ಈ ಭಾವ ವಿಕಾಸಹೊಂದಿ, ನಾನಾ ರೀತಿಯ ಆರಾಧನೆಯ ಕ್ರಮಗಳಾಗಿ ರೂಪತಾಳಿದವು. ಈ ಭಾವದಲ್ಲಿ ಭಕ್ತನದು ಸಂತಾನಭಾವ; ಜಗನ್ಮಾತೆಯಲ್ಲೇ ಸರ್ವಸ್ವವನ್ನೂ ಕಾಣುವ, ಅವಳಲ್ಲೇ ತನ್ನ ಸರ್ವಸ್ವವನ್ನೂ ಅರ್ಪಿಸುವ ಸಮರ್ಪಣ ಭಾವ. ಶ್ರೀರಾಮಕೃಷ್ಣರು ಹೇಳುವಂತೆ, ಇದು ಅತ್ಯಂತ ಪವಿತ್ರವಾದ ಭಾವನೆ. ಇಲ್ಲಿ ಸ್ವಾರ್ಥ, ಅಹಂಕಾರಗಳ ಸ್ಪರ್ಶ ಕಿಂಚಿತ್ತೂ ಇಲ್ಲ. ತನ್ನ ತಾಯಿಯೇ ಜಗನ್ಮಾತೆ ಹಾಗೂ ಜಗದ್ರಕ್ಷಕಿಯಾಗಿರುವುದರಿಂದ ತನಗೆ ಯಾವುದೇ ಭಯವಿಲ್ಲ, ಯಾವುದೇ ಆತಂಕವಿಲ್ಲ. ಅವಳು ಹೇಗೆ ನಡೆಸಿಕೊಂಡು ಹೋಗುತ್ತಾಳೋ ಹಾಗೆ, ಹೇಗೆ ದಾರಿ ತೋರಿಸುತ್ತಾಳೋ ಹಾಗೆ – ತನ್ನ ಕೆಲಸ ಕೇವಲ ಅವಳನ್ನು ಕರೆಯುತ್ತಾ ಹೋಗುವುದು. ಇಂತಹ ನಿರ್ಭರತೆಯನ್ನು ಶ್ರೀರಾಮಕೃಷ್ಣರಲ್ಲೂ, ಶ್ರೀಮಾತೆಯವರಲ್ಲೂ ಕಾಣಬಹುದು; ರಾಮಪ್ರಸಾದ, ಕಮಲಾಕಾಂತ ಮೊದಲಾದ ಬಂಗಾಳದ ಸಂತರಲ್ಲೂ ಕಾಣಬಹುದು. ತನ್ನೆಲ್ಲ ಭಾರವನ್ನೂ ಜಗನ್ಮಾತೆಯ ಮೇಲೆ ಹೊರಿಸಿ, ತಾನು ನಿಶ್ಚಿಂತನಾಗಿ ಅವಳನ್ನು ಪ್ರಾರ್ಥಿಸುವ ಈ ಬಗೆಯ ಸಾಧನೆ ತಾಂತ್ರಿಕ ಸಾಧನೆಯ ವಿಧಾನವೂ ಆಗಿದೆ; ಅಲ್ಲಿ ಹಲವು ಬಗೆಯ ಆಚರಣೆಗಳ ನಡುವೆ ಈ ಭಾವ ಅತಿಮುಖ್ಯವಾಗಿ ಇರಬೇಕಾದದ್ದು; ಇದನ್ನು ಮರೆತ ಸಾಧಕರು ದಾರಿ ತಪ್ಪುವ ಸಾಧ್ಯತೆಯಿದೆ ಎಂದು ಶ್ರೀರಾಮಕೃಷ್ಣರು



ಹೇಳುತ್ತಾರೆ. ತಾಂತ್ರಿಕ ಸಾಧನೆಯ ಸಾರವಾದ ಈ ಮಾತೃಭಾವದ ಉಪಾಸನೆಯನ್ನು ಉಳಿದ ಅನಗತ್ಯವೆನಿಸುವ ಆಚರಣೆಗಳಿಂದ ಬೇರ್ಪಡಿಸಿ, ಶುದ್ಧವಾದ ಭಕ್ತಿಮಾರ್ಗಕ್ಕೆ ಅದು ಅನುಕೂಲವಾಗುವಂತೆ ಅವರು ಮಾರ್ಪಡಿಸಿದರು. ಶ್ರೀರಾಮಕೃಷ್ಣರ ನವೀನ ದೃಷ್ಟಿ ಹಾಗೂ ನೂತನ ಭಾವ-ಭಕ್ತಿಯ ವಿಧಾನ ಅನೇಕ ಸಾಧಕರ ಬದುಕಿಗೆ ಹೊಸ ಪ್ರೇರಣೆಯನ್ನು ನೀಡಿತು.

## ಮಾಯಾವಿಲಾಸ

ಮಾತೃ ಆರಾಧನೆಯು ಕೇವಲ ಒಂದೇ ಭಾವಕ್ಕೆ ಸೀಮಿತವಾಗದೆ, ಅನೇಕ ಸನ್ನಿವೇಶಗಳಲ್ಲಿ ಹಲವು ಸಾಧಕರ ದರ್ಶನ, ಅನುಭವ, ಭಾವನೆಗಳಿಗೆ ಅನುಗುಣವಾಗಿ ವೈವಿಧ್ಯಮಯವಾದ ರೂಪಗಳನ್ನು ಪಡೆಯಿತು. ಸಾತ್ವಿಕ ಜನರ, ಭಕ್ತರ, ಉತ್ತಮರ ರಕ್ಷಕಳಾದ ದೇವಿಯು ದುಷ್ಟರ ವಧೆಗಾಗಿ ಅನೇಕ ರೂಪಗಳನ್ನು ತಾಳಿದಳು ಎಂಬ ಕಥಾನಕದ ಹಿನ್ನೆಲೆಯಲ್ಲಿ ಹಲವು ಆವಿರ್ಭಾವಗಳ ಆರಾಧನೆ ಅಸ್ತಿತ್ವಕ್ಕೆ ಬಂತು. ಹೀಗೆ ದೇವಿಯ ರೂಪ ದುರ್ಗೆ (ಹಾಗೂ ನವದುರ್ಗೆ), ಕಾಳಿ, ಮಹಿಷಾಸುರಮರ್ದಿನಿ, ಚಾಮುಂಡಿ, ಶಾಂಭವಿ, ಮೊದಲಾಗಿ ಅಭಿವ್ಯಕ್ತವಾದವು. ಇದಲ್ಲದೆ ಪೌರಾಣಿಕ ಕಥೆಗಳ ಹಿನ್ನೆಲೆಯಿಂದ ಪಾರ್ವತಿ, ಲಕ್ಷ್ಮಿ, ಸರಸ್ವತಿಯೇ ಮೊದಲಾದ ದೇವತೆಗಳೂ, ತಾಂತ್ರಿಕ ಹಿನ್ನೆಲೆಯಿಂದ ಸಪ್ತಮಾತೃಕೆ, ದಶಮಹಾವಿದ್ಯಾ ಮೊದಲಾದ ರೂಪಗಳೂ ವಿವಿಧ ಕಡೆ ಪೂಜಿಸಲ್ಪಡುತ್ತಿವೆ. ಇಷ್ಟು ವೈವಿಧ್ಯಮಯವಾದ ಆವಿರ್ಭಾವಗಳು ಯಾವ ಕಾರಣಕ್ಕಾಗಿ ರೂಪ ತಳೆದಿರಬಹುದು? ಬಹುಶಃ ಸಾಧಕನ ಚಿತ್ತಚಾಂಚಲ್ಯದಲ್ಲಿ ನರ್ತನಗೈಯುವ ಭಾವವಿಲಾಸಗಳು ಅರ್ಥಶೂನ್ಯವಾದ ನೆಲೆಗಳಲ್ಲಿ ಸಂಚರಿಸಿ, ಅವನು ಮತ್ತೆ ಮತ್ತೆ ಅವಿದ್ಯೆಯ ಸರಪಣಿಯಲ್ಲಿ ಬಂಧಿತನಾಗುವ ಗತಿಯನ್ನು ತಪ್ಪಿಸಲು, ಮತ್ತೆ ಅವನ ಭಾವನೆಗಳನ್ನು ಒಂದು ದಿವ್ಯವಾದ ವರ್ಣಮಯ ಜಗತ್ತಿಗೆ ಎಳೆದೊಯ್ದು, ಅಲ್ಲಿ ಅದೇ ಭಾವವಿಲಾಸದಿಂದ ಭಗವತಿಯತ್ತ ಒಮ್ಮುಖಗೊಳಿಸುವ ಒಂದು ಪ್ರಕ್ರಿಯೆ ಇದಾಗಿರಬೇಕು. ಬಾಹ್ಯಜಗತ್ತಿನ ಲೀಲಾಸೌಂದರ್ಯವನ್ನು ಭಗವದಭಿಮುಖಗೊಳಿಸುವ ಕ್ರಿಯಾವಿಧಾನ ತಂತ್ರಶಾಸ್ತ್ರ ಹಾಗೂ ತಾಂತ್ರಿಕ ವಿಧಿವಿಧಾನಗಳ ಅತ್ಯದ್ಭುತವಾದ ಒಂದು ಮಾರ್ಗ. ಈ ವಿಧಾನದ ಸರಿಯಾದ ಆಚರಣೆ ಸಾಧಕನ ಮನಸ್ಸನ್ನು ಆಧ್ಯಾತ್ಮಿಕ ಔನ್ನತ್ಯದತ್ತ ಒಯ್ಯುತ್ತದೆ; ಕರ್ಮಬಂಧನದಿಂದ ಬಿಡಿಸಲು ಅಗತ್ಯವಾದ ದೈವೀಕೃಪೆಗೆ ಕಾರಣೀಭೂತವಾಗುತ್ತದೆ. ವೇದಾಂತದ ತಾತ್ತ್ವಿಕ ಏಕತೆ ಹಾಗೂ ಭಕ್ತಿಮಾರ್ಗದ ಭಾವಾಭಿವ್ಯಕ್ತಿ ಇವೆರಡನ್ನೂ ಮೇಳೈಸಿಕೊಂಡಿರುವ ಈ ಆರಾಧನಾಕ್ರಮ ಇಲ್ಲಿ ಪರಿಪಕ್ವವಾಗುವುದು. ಆಧ್ಯಾತ್ಮಿಕ ಸಾಧನೆಗೆ ಈ ಎಲ್ಲ ಅಭಿವ್ಯಕ್ತಿಗಳು, ಅವುಗಳನ್ನು ಅನುಸರಿಸುವ ವಿಧಿವಿಧಾನ-ಆಚರಣೆಗಳು ಸಹಾಯಕ; ಆದರೆ ಭಾವವೈವಿಧ್ಯವು ಭಾವಾತಿರೇಕವಾಗದಂತೆ, ಭಕ್ತಿಯ ಅಭಿವ್ಯಕ್ತಿ ಭಾವುಕತೆಯಾಗದಂತೆ ವಿವೇಕಪೂರ್ಣವಾದ ಎಚ್ಚರವಿರಬೇಕಾದುದು ಸಾಧಕನಿಗೆ ಅನಿವಾರ್ಯ. ಸ್ವಾಮಿ ವಿವೇಕಾನಂದರು ಜ್ಞಾನ-ಭಕ್ತಿ ಮಾರ್ಗಗಳ ಇತಿಮಿತಿಯನ್ನು ಕುರಿತು ಹೇಳುವಾಗ ಈ ಅಂಶವನ್ನು ಸ್ಪಷ್ಟವಾಗಿ ನುಡಿದಿದ್ದಾರೆ.

## ಭವ್ಯತೆಯ ಪರಾಕಾಷ್ಠೆ

ಧಾರ್ಮಿಕ ಹಾಗೂ ಆಧ್ಯಾತ್ಮಿಕ ಪರಿಧಿಯಾಚೆ ನಿಂತು ನೋಡುವಾಗ ಮಾತೃ ಆರಾಧನೆಯ ಅನೇಕ ಬಗೆಗಳು ವಿಚಿತ್ರವೆಂದು ಕಾಣಿಸುವುವು; ಅನೇಕವೇಳೆ ಅವು ತೀರ ಪ್ರಾಕೃತವೆನ್ನಿಸುವುವು. ಆದರೆ ಆಚರಣೆ, ವಿಧಿ ವಿಧಾನ, ದೇವತಾಮೂರ್ತಿ, ಪೌರಾಣಿಕ ಕಥಾನಕ - ಈ ಬಾಹ್ಯರಚನೆಗಳಿಂದ ಮಾತ್ರ ಮಾತೃ ಆರಾಧನೆಯನ್ನು ಅಳೆಯಲಾಗದು. ಇವುಗಳ ಆಳದಲ್ಲಿ ಮಾನವನ ಭಾವನಾಪ್ರಪಂಚವಿದೆ. ತರ್ಕ, ಚಿಂತನೆ, ತತ್ತ್ವಗಳನ್ನು ಅವಲಂಬಿಸಿ ವಿಶ್ಲೇಷಣಾತ್ಮಕವಾದ ಪಥದಲ್ಲಿ ಮುನ್ನಡೆಯುವ ಸಾಧಕನಿಗೂ ದೈವೀಶಕ್ತಿಯ ಕೃಪೆಯಿಂದ ಚೈತನ್ಯ ದೊರೆಯಬೇಕು; ಅದೇ ರೀತಿ ಮುಗ್ಧಭಕ್ತಿಯನ್ನು ನಿವೇದಿಸಿಕೊಳ್ಳುವ ಪಾಮರರಿಗೂ, ಭಕ್ತಿಪರವಾದ ಆಚರಣೆಗಳೊಂದಿಗೆ ದೇವರನ್ನು ಪ್ರಾರ್ಥಿಸುವ ಭಕ್ತನಿಗೂ ಈ ಅಗೋಚರ ಶಕ್ತಿಯ ಬೆಂಬಲ ಬೇಕು. ಪ್ರಾಮಾಣಿಕವಾದ ಶ್ರದ್ಧೆ, ಅನನ್ಯ ಶರಣಾಗತಿ, ದೇವರು ಮಾತ್ರವೇ ಎಲ್ಲವನ್ನೂ ನಡೆಸುವವನು ಎಂಬ ವಿಶ್ವಾಸ - ಇವು ಅಂತರಂಗದಲ್ಲಿ ತುಂಬಿಕೊಂಡಿರುವ ಸಾಧಕನು ಆಚರಿಸುವ ಎಲ್ಲ ಬಗೆಯ ಧಾರ್ಮಿಕ, ಆಧ್ಯಾತ್ಮಿಕ ಚಟುವಟಿಕೆಗಳಿಗೂ ವಿಶೇಷವಾದ ಒಂದು ಅರ್ಥವಿದೆ. ಅದು ಅವನ ಜೀವನವನ್ನು ರೂಪಿಸುವ ಅಂಶ. ಆದ್ದರಿಂದ ಇವನ್ನೆಲ್ಲ ಗಮನಿಸುವ ದೃಷ್ಟಿಕೋನದಲ್ಲಿ ಸೂಕ್ಷ್ಮವಾದ ಮತ್ತು ವಿಶಾಲಭಾವದ ಗ್ರಹಿಕೆ ಇರಬೇಕು.

ಮಾತೃ ಆರಾಧನೆ ಮಾನವ ಭಾವನೆಗಳನ್ನು ವಿಸ್ತರಿಸುತ್ತ ಸಾಗಿತು. ಅಲ್ಲಿ ರೂಪವೈವಿಧ್ಯ, ವರ್ಣವೈವಿಧ್ಯ, ಭಾವವೈವಿಧ್ಯಗಳೊಂದಿಗೆ ಅಂತಃಕರಣಪೂರ್ವಕವಾದ ನಿಷ್ಠಾಭಕ್ತಿ, ಕಲಾಪೂರ್ಣವಾದ ಆತ್ಮನಿವೇದನೆ ಒಂದು ಬಗೆಯ ಸಹಜ ಅಭಿವ್ಯಕ್ತಿಗೆ ದಾರಿ ಮಾಡಿತು. ಆದರೆ ಇದರಾಚೆಗೂ ಇರಬಹುದಾದ ಅಕ್ಷತಭೂಮಿಯನ್ನು ಅರಸುವ ಧೈರ್ಯಮಾಡಿದ ಸಾಧಕನಿಗೆ ಗೋಚರವಾದದ್ದು ಅಸಾಧಾರಣ ಸೌಂದರ್ಯವನ್ನು ಹೊತ್ತ ಭವ್ಯಜಗತ್ತು - ಅದೇ ಎಲ್ಲ ವೈಪರೀತ್ಯಗಳ, ಎಲ್ಲ ವೈರುಧ್ಯಗಳ ಸಮತೋಲನದ ಜಗತ್ತು. ಕೇವಲ ಶುಭ್ರ, ಸ್ವಚ್ಛ, ಸಾತ್ವಿಕ ಹಾಗೂ ಒಳಿತಿನ ಕಡೆಗೇ ಮುಖಮಾಡಿದ ಮಾನವಮನಸ್ಸು ಅದಕ್ಕೆ ವಿರುದ್ಧವಾದ ಬೀಭತ್ಸಕರವಾದ, ರೌದ್ರಭಯಾನಕವಾದ, ಅಸಹ್ಯ ಮೂಡಿಸುವ ಭಾವಗಳತ್ತ ಮುಖ ತಿರುಗಿಸುವುದೇಕೆ? ಸತ್ಯವೆನ್ನುವುದು ನಿರ್ದಾಕ್ಷಿಣ್ಯ ಹಾಗೂ ಕಠೋರ; ಎಲ್ಲ ದ್ವಂದ್ವಗಳಲ್ಲಿ ಅದು ಏಕತೆಯನ್ನು ಕಾಣಬೇಕು. ಹಾಗಾಗಿ ಈ ಅಹಿತಕರವಾದ ಭೀಕರ ಭಾವನೆಗಳಲ್ಲೂ ಅದೇ ದೈವಿಕತೆಯ ಅಭಿವ್ಯಕ್ತಿಯಲ್ಲವೆ ಇರುವುದು? ಎರಡನ್ನೂ ಸಮಾನವಾಗಿ